ಕೊಳ್ಳೆಗಾಲ ತಾಲ್ಲೂಕಿನ ಸತ್ತೆಗಾಲ ಗ್ರಾಮವನ್ನು ಜಹಗೀರಿಂ ಗ್ರಾಮಂವಾಗಿ ಮಾರ್ಪಾಡು ಮಾಡುವ ಬಗ್ಗೆ.

(೪೬) ಶ್ರೀ ಜೆ. ರಾಜೂಗೌಡ (ಹೆನೂರು).—ಕಂದಾಯ ಮಂತ್ರಿಗಳು ಈ ಕೆಳಗಿನ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಕೊಳ್ಳೆಗಾಲ ತಾಲ್ಲೂಕಿನ ಸತ್ತೆಗಾಲ ಗ್ರಾಮವನ್ನು ಜಹಗೀರು ಗ್ರಾಮವಾಗಿ ಯಾವಾಗ ಮಾರ್ಪಾಡು ಮಾಡಲಾಯಿತು ;

(ಆ) ಎಷ್ಟು ವರ್ಷಗಳಕಾಲ ಈ ಗ್ರಾಮವು ಜಹಗೀರುದಾರರ ಮೇಲ್ವಿಚಾರಣೆಗೆ ಒಳಪಟ್ಟಿತ್ತು ;

(ಇ) ಜಹಗೀರುದಾರರು ಸರ್ಕಾರಕ್ಕೆ ಈ ಗ್ರಾಮವನ್ನು ಸರ್ಕಾರಕ್ಕೆ ಬಿಟ್ಟುಕೊಡಲು ಯಾವಾಗ ಒಪ್ಪಿಗೆ ಕೊಟ್ಟಿರುತ್ತಾರೆ ;

(ಈ) ಒಪ್ಪಿಗೆ ಪತ್ರದಲ್ಲಿ ನಮೂದಿಸಿರುವ ನಿಬಂಧನೆಗಳೇನು,

(ಉ) ಜಹಗೀರ ವ್ಯಾಪ್ತಿಗೆ ಬರುವ ಜಮೀನಿನ ವಿವರ ಮತ್ತು ವಿಸ್ತೀರ್ಣವೆಷ್ಟು ;

(ಊ) ಜಹಗೀರಿಗೆ ಸಂಬಂಧಪಟ್ಟ ಅರಣ್ಯ ಪ್ರದೇಶವು ಈಗ ಯಾರ ಮೇಲ್ವಿಚಾರಣೆಗೆ ಒಳಪಟ್ಟಿದೆ ;

(ಋ) ಮೇಲ್ಕಂಡ ಅರಣ್ಯ ಸಂಪತ್ತು ಅನೇಕ ವಿಧದಲ್ಲಿ ಸೋರಿ ಹೋಗುತ್ತಿದ್ದರೂ ಸರಕಾರ ಕೈಕಟ್ಟಿ ಕುಳಿತಿರಲು ಕಾರಣವೇನು ?

(ಋೂ) ಜಹಗೀರನ್ನು ರದ್ದು ಮಾಡುವ ಬಗ್ಗೆ ಸರಕಾರದ ನಿಲುವೇನು,

(ಎ) ಸತ್ತೆಗಾಲಕ್ಕೆ ಸಂಬಂಧಪಟ್ಟ ಭೂದಾಖಲೆಗಳು ಎಲ್ಲಿ ದೊರೆಯತ್ತವೆ ;

(ಏ) ಸತ್ತೆಗಾಲದ ಭೂಕಂದಾಯ ಮತ್ತು ನೀರಿನ ತೆರಿಗೆಯನ್ನು ಯಾರು ವಸೂಲು ಮಾಡುತ್ತಿದ್ದಾರೆ ;

(ಐ) ಸತ್ತೆಗಾಲದ ಗ್ರಾಮಕ್ಕೆ ಸಂಬಂಧಪಟ್ಟ ಗೇಣಿ ಪೊಕ್ಕದ್ದಮೆಗಳು ಭೂನ್ಯಾಯ ಮಂಡಳಿಯ ಮುಂದೆ ಎಷ್ಟಿದೆ ;

(ಒ) ಇದುವರೆವಿಗೂ ತೀರ್ಮಾನ ಆಗಿರುವ ಪ್ರಕರಣಗಳೆಷ್ಟು ;

(ಓ) ಸತ್ತೇಗಾಲ ಗ್ರಾಮವು ಜಹಗೀರ ಗ್ರಾಮವಾಗಿದ್ದರೆ, ಇದರ ವ್ಯಾಪ್ತಿಯಲ್ಲಿ ಬರುವ ಎಷ್ಟು ದೇವಸ್ಥಾನಗಳನ್ನು ಮುಜುರಾಯಿಗೆ ಒಳಪಡಿಸಿದ್ದೀರಿ ;

(ಔ) ಗೋಪಿನಾಥ ಎಂಬ ದಾಖಲೆ ಗ್ರಾಮವನ್ನು ಗ್ರಾಮಾಭಿವೃದ್ಧಿ ದೃಷ್ಟಿಯಿಂದಲೂ ಚುನಾವಣೆ ದೃಷ್ಟಿಯಿಂದಲೂ ಸ ಗ್ರಾಮವನ್ನಾಗಿ ಮಾರ್ಪಡಿಸಬೇಕೆಂದು ಹತ್ತು ವರುಷಗಳಿಂದಲೂ ಸರ್ಕಾರಕ್ಕೆ ಒತ್ತಾಯ ತಂದರೂ ಮಾಡದಿರಲು ಕಾರಣವೇನು ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಕಂದಾಯ ಮಂತ್ರಿಗಳು

ಉತ್ತರ.—(ಅ) ಮದ್ರಾಸು ಸರ್ಕಾರದ ಗ್ರಾಂಟ್ ನಂ. ೧೮೧೮ ರಲ್ಲಿ ದಿನಾಂಕ ೨೬–೨–೧೮೩೦ ರಲ್ಲಿ ಸನ್ನದುಗಳನ್ನು ೭–೮–೧೮೩೨ ಮತ್ತು ೧೫–೩–೧೮೩೬ ಮೇರೆ ಜಹಗೀರಾಗಿ ಮಾರ್ಪಾಟಾಯಿತು.

(ಆ) ದಿನಾಂಕ ೭–೮–೧೮೩೨ ರಿಂದ ೫–೬–೧೯೭೮ ವರೆಗೆ.

(ಇ) ದಿನಾಂಕ ೫–೬–೧೯೭೮ ರಿಂದ ಸರ್ಕಾರದ ವಶಕ್ಕೆ ಬಂದಿರುವುದರಿಂದ ಒಪ್ಪಿಗೆಯ ಪ್ರಶ್ನೆ ಇಲ್ಲ.

(ಈ) ಮೇಲೆ ಕೊಟ್ಟ (ಇ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಉ)—	ಎಕರೆ	ಗುಂಟೆ
ತರಿ	೭೭೮	೯೧
ಖುಷ್ಕಿ ...	೫,೨೫೩	೩೧
ಅರಣ್ಯ ಪ್ರದೇಶ ...	೧೩.೪೩೧	೧೩

(ಊ) ಅರಣ್ಯ ಇಲಾಖೆಯ ಮೇಲ್ವಿಚಾರಣೆಗೆ ಒಳಪಟ್ಟಿದೆ.

(ಋ) ಅರಣ್ಯ ಇಲಾಖೆಯವರು ತಕ್ಕ ಕ್ರಮ ತೆಗೆದು ಕೊಳ್ಳುತ್ತಿದ್ದಾರೆ.

(ಋೂ) ದಿನಾಂಕ ೫-೬-೧೯೭೮ ರಿಂದ ಜಹಗೀರು ರದ್ದಾಗಿ ಸರ್ಕಾರದ ವಶದಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಎ) ಅಸಿಸ್ಟೆಂಟ್ ಸೂಪರಿಂಟೆಂಡೆಟ್ ಆಫ್ ಲ್ಯಾಂಡ್ ರೆಕಾರ್ಡ್ ಮೈಸೂರು ಅವರ ಆಫೀಸಿನಲ್ಲಿ ದೊರೆಯುತ್ತದೆ.

(ಏ) ಸರ್ಕಾರದವರೇ ವಸೂಲ್ಮಾಡುತ್ತಿದ್ದಾರೆ.

(ಐ) ೭೦೦ ಮೊಕದ್ದಮೆಗಳು.

(ಒ) ಕೆಲವೊಂದು ಪ್ರಕರಗಳನ್ನು ಬಿಟ್ಟು ಎಲ್ಲವೂ ತೀರ್ಮಾನವಾಗಿವೆ (೧-೮-೧೯೮೨ ಕೊಳ್ಳೇಗಾಲ ತಾಲ್ಲೂಕಿನಲ್ಲಿ ೨೩ ಪ್ರಕರಣಗಳು ಮಾತ್ರ ಉಳಿದಿವೆ.

(ಓ) (೧) ರಂಗನಾಥಸ್ವಾಮಿ ಮತ್ತು ಇತರೆ ದೇವಸ್ಥಾನಗಳು, ಶಿವಸಮುದ್ರ.

(೨) ವರದರಾಜಸ್ವಾಮಿ ಮತ್ತು ಗಂಗಾಧರಸ್ವಾಮಿ ದೇವಸ್ಥಾನ ಸತ್ತೇಗಾಲ.

(೩) ಕಲ್ಯಾಣ ಬಸವೇಶ್ವರ ಸ್ವಾಮಿ ದೇವಸ್ಥಾನ ಸತ್ತೇಗಾಲ.

(ಔ) ಸರಕಾರದ ಪರಿಶೀಲನೆಯಲ್ಲಿದೆ.

Allotment of sites in Chittapur Taluk

69 SRI PRABHAKAR TELKAR (Chittapur).— Will the Minister for Housing and Urban Development be pleased to state ;

(a) the number of villages in Chittapur taluk where sites have been allotted and developments of the sites have taken place ;

(b) the names of villages, where land acquisition proceedings have been commenced for the purpose of providing sites to the siteless people ?

SRI DHARM SING (Minister for Housing and Urban Development)–

(a) The sites have been developed and distributed in (63) villages in Chittapur Taluk.

(b) List appended in Annexure 'A'